ಸೀಸನ್‌ನಲ್ಲಿ ಲಿಫ್ಟ್ ಮಾಡಿ ಬೇರೆ ಕಡೆ ರಿಸರ್ವ್ ಮಾಡುವುದಕ್ಕೆ ಸಾಧ್ಯವಾಗುತ್ತದೆಯೆ? ಇವೆಲ್ಲವನ್ನೂ ಸ್ವಲ್ಪ ಮಟ್ಟಿಗೆ ತಾಂತ್ರಿಕವಾಗಿ ವಿಮರ್ಶೆ ಮಾಡಬೇಕಾಗಿದೆ. ಈ ಹಂತದಲ್ಲಿ ಕ್ರಮಕೈಗೊಳ್ಳುವುದಕ್ಕೆ ಆಗುವುದಿಲ್ಲ.

ಶ್ರೀ ಜಿ.ವಿ ಶ್ರೀರಾಮರೆಡ್ಡಿ : ಇದರ ಬಗ್ಗೆ ತಕ್ಷಣ ಏನಾದರೂ ಕ್ರಮ ಕೈಗೊಂಡು ನಮ್ಮ ಕೋಲಾರ ಜಿಲ್ಲೆಯನ್ನು ಸಿಂಪತೆಟಿಕ್ಕಾಗಿ ಪರಿಗಣಿಸಬೇಕು. ಏಕೆಂದರೆ ನಮ್ಮ ಜಿಲ್ಲೆಯ ಸಮಸ್ಯೆ ನಿಮಗೆ ಗೊತ್ತಿದೆ. ಅದಕ್ಕೆ ದಯವಿಟ್ಟು ಅದಷ್ಟು ಬೇಗ ಸಿಂಪತೆಟಿಕ್ಕಾಗಿ ಪರಿಗಣಿಸಬೇಕೆಂದು ನಾನು ಕೇಳಿಕೊಳ್ಳುತ್ತೇನೆ.

ಶ್ರೀ ಹೆಚ್.ಡಿ. ದೇವೇಗೌಡ : ಈ ಒಂದು ಭದ್ರಾ ಮೇಲ್ದಂಡೆ ಯೋಜನೆ ಬಗ್ಗೆ ನಾನು ಈ ಸದನದಲ್ಲಿ ಇಲ್ಲದೆ ಇರತಕ್ಕಂತಹವರ ಹೆಸರನ್ನು ಹೇಳಿದರೆ ತಪ್ಪಾಗುವುದಿಲ್ಲವೆಂದು ನಿಮ್ಮ ಅನುಮತಿಯಿಂದ ಹೇಳುತ್ತಿದ್ದೇನೆ. ಶ್ರೀಮಾನ್ ಸಿದ್ಧವನಹಳ್ಳಿ ನಿಜಲಿಂಗಪ್ಪನವರು, ಆ ಜಿಲ್ಲೆಯ ಮುಖಂಡರುಗಳಾದ ಶ್ರೀಮಾನ್ ಜಾಫರ್ ಶರೀಫ್, ಕೃಷ್ಣರಾಯರು, ನಾನು ಆರು ವರ್ಷ ನೀರಾವರಿ ಮಂತ್ರಿಯಾಗಿದ್ದಂಥ ಕಾಲದಲ್ಲಿ ಸಾಕಷ್ಟು ಒತ್ತಡಗಳನ್ನು ತಂದರು. ನನ್ನ ಮುಂದೆಯೂ ಕೂಡ ಬಂತು. ಇತ್ತೀಚೆಗೆ ನಡೆದಿರುವುದು. ಅದರೆ ಆ ಸಂದರ್ಭದಲ್ಲಿ ಬಾಳೆ ಹುಂಡ್ರಿಯವರು ಸೇರಿ ಒಂದು ನಿರ್ಣಯ ಮಾಡಿ ಒಂದು ಎಷ್ಟಿಮೇಟನ್ನು ಕೇಂದ್ರ ಸರ್ಕಾರಕ್ಕೆ ಕಳುಹಿಸಿದೆವು. ಯೋಜನಾ ಆಯೋಗದ ವರ್ಕಿಂಗ್ ಗ್ರೂಪ್‌ನವರು ಎಲ್ಲಾ ಹಳೆಯ ಪ್ರಾಜೆಕ್ಟ್‌ಗಳನ್ನು ಸೇರಿಸಿಕೊಳ್ಳುವುದಕ್ಕೆ ಸಾಧ್ಯವಿಲ್ಲವೆಂದು 6-8 ಪ್ರಾಜೆಕ್ಟ್‌ಗಳನ್ನು ವಾಪಸ್ ಕಳುಹಿಸಿದರು. ಅದರ ಬಗ್ಗೆ ಸಾಕಷ್ಟು ಜಟಿಲವಾದಂಥ ಪರಿಸರ ಸಮಸ್ಯೆ ಇದೆ, ಜೊತೆಗೆ ಆರ್ಥಿಕವಾಗಿ ಪೀಸಿಬಿಲಿಟಿ ಇದೆಯೇ ಎನ್ನವ ಬಗ್ಗಮೆ ಯೋಚನೆ ಮಾಡಲೇಕಾಗಿದೆ. ಇತ್ತೀಚೆಗೆ ನಾನು ಸಂಬಂಧಪಟ್ಟ ಅಧಿಕಾರಿಗಳೊಂದಿಗೆ ಸಮಾಲೋಚನೆ ಮಾಡಿದ್ದೇನೆ. ಅದೇನೆಂದರೆ 80 ಕಿ.ಮಿ. ಡೆಡ್ ಕೆನಾಲ್ ತೆಗೆಯುವುದಕ್ಕೆ ಬದಲಾಗಿ ನೀರನ್ನು ಲಿಫ್ಟ್ ಮಾಡಿ ಅಲ್ಲಿಂದ ಮುಂದಕ್ಕೆ ಮೈದಾನ ಪ್ರದೇಶದಲ್ಲಿ ಒಂದು ರಿಸರ್ವಾಯರ್ ಹಾಕಿ, ಅಲ್ಲಿ ಅರಣ್ಯ ಪ್ರದೇಶ. ಕಾಫಿ ತೋಟ, ಏಲಕ್ಕಿ ತೋಟ ಏನು ಮುಳುಗಡೆಯಾಗುತ್ತದೆ. ಆ ಮುಳುಗಡೆ ಪ್ರದೇಶವನ್ನು ಕಡಿಮೆ ಮಾಡಲಿಕ್ಕೆ ಸಾಧ್ಯವೇ? ಹೀಗೆ ಪರ್ಯಾಯವಾಗಿ ಎಲ್ಲಾ ಯೋಚನೆ ಮಾಡಿ ಎಂದು ಸೂಚನೆ ಕೊಟ್ಟಿದ್ದೇನೆ. ಇದರ ಬಗ್ಗೆ ಪರಿಶೀಲನೆ ಮಾಡುತ್ತೇನೆ

ಅನಗವಾಡಿಯ ಸೇತುವೆಗೆ ಬದಲೀ ಸೇತುವೆ.

508 - ಶ್ರೀ ಜೆ.ಟಿ. ಪಾಟೀಲ (ಬೀಳಗಿ) : ಮಾನ್ಯ ಮುಖ್ಯಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಕೃಷ್ಣ ಮೇಲ್ದಂಡೆ ಯೋಜನೆಯೂ ಮುಳುಗಡೆಯಾರಲಿರುವ ಅನಗವಾಡಿಯ ಸೇತುವೆ ಬದಲಿ ಸೇತುವೆ ನಿರ್ಮಾಣ ಕಾರ್ಯವನ್ನು ಯಾವಾಗ ಪ್ರಾರಂಭ ಮಾಡಲಾಗುತ್ತದೆ.

ಆ) ಈ ಯೋಜನೆಯ ರೂಪು ರೇಖೆಗಳೇನು? ಹಾಗು ಅಂದಾಜು ವೆಚ್ಚ ಎಷ್ಟು?

ಇ) ಯೋಜನೆಯ ಟೆಂಡರ್ ಕರೆದಿರುವುದು ನಿಜವೇ. ಹಾಗಿದ್ದಲ್ಲಿ ಟೆಂಡರ್ ಒಪ್ಪಿಗೆಯಾಗಿದೆಯೆ.

ಈ) ಈ ಕಾಮಗಾರಿಯನ್ನು ಯಾವಾಗ ಪೂರ್ಣಗೊಳಿಸಲಾಗುತ್ತದೆ?

ಉ) 1966 ರಲ್ಲಿ ಕೃಷ್ಣ ಮೇಲ್ದಂಡೆ ಯೋಜನೆಯ ಹಿನ್ನೀರು ಬಂದು ನಿಂತಮೇಲೆ ಈ ಸೇತುವೆ ಕಾಮಗಾರಿ ಪೂರ್ಣಗೊಳ್ಳಲು ಸಾಧ್ಯವಿಲ್ಲ ಎಂಬುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಶ್ರೀ ಹೆಚ್.ಡಿ. ದೇವೇಗೌಡ (ಮುಖ್ಯಮಂತ್ರಿಗಳು) :

ಅ) ಈಗಾಗಲೇ ಟೆಂಡರ್‌ಗಳನ್ನು ಸ್ವೀಕರಿಸಿದ್ದು, ಮುಂಬರುವ 3-4 ತಿಂಗಳುಗಳಲ್ಲಿ ನಿರ್ಮಾಣ ಕಾರ್ಯ ಪ್ರಾರಂಭ ಮಾಡಲಾಗುವುದು.

ಆ) ಆರ್‌ಸಿಸಿ 'ಟಿ' ಬೀಮ್ ಒಳಗೊಂಡ ಡೆಕ್‌ಸ್ಲ್ಯಾಬ್ 25.34 ಮೀ.ನ 12 ಸ್ಲ್ಯಾನ್‌ಗಳು. ಅಂದಾಜು ವೆಚ್ಚ ರೂ.1123 ಲಕ್ಷಗಳು.

ಇ) ನಿಜ. ಅದು ಟೆಂಡರ್ ಮೌಲ್ಯ ನಿರ್ಧರಣಾ ಹಂತದಲ್ಲಿದೆ.

ಈ) ನಿರ್ಮಾಣ ಕಾರ್ಯ ಪ್ರಾರಂಭವಾದ ನಂತರ ಎರಡೂವರೆ ವರ್ಷಗಳಲ್ಲಿ ಪೂರ್ಣಗೊಳಿಸಲು ಯೋಜಿಸಿದೆ.

ಉ) ಸರ್ಕಾರದ ಗಮನಕ್ಕೆ ಬಂದಿದೆ. ಆದರೆ ಹಿನ್ನೀರಿನ ಮಟ್ಟ ಮೇಲೇರಿದಂತೆ ಅದಕ್ಕನುಗುಣವಾಗಿ ಕೆಲಸ ಪೂರ್ಣಗೊಳಿಸಲು ಯೋಜಿಸಲಾಗಿದೆ.

ಶ್ರೀ ಡಿ.ಆರ್. ಪಾಟೀಲ್ (ಗದಗ) : ಶ್ರೀ ಜೆ.ಟಿ. ಪಾಟೀಲ್‌ರವರ ಪರವಾಗಿ ಶ್ರೀ ಡಿ.ಆರ್. ಪಾಟೀಲ್ ಈ ಅನಗವಾಡಿಯ ಬದಲಿ ಸೇತುವೆಯ ಕೆಲಸ ಈ ಮೂರ್ನಾಲ್ಕು ತಿಂಗಳಲ್ಲಿ ಪ್ರಾರಂಭ ಮಾಡಲಿದ್ದೇವೆಂದು ಹೇಳಿದರು. ಮೂರ್ನಾಲ್ಕು ತಿಂಗಳ ನಂತರ ಮಳೆಗಾಲ ಪ್ರಾರಂಭವಾಗುತ್ತದೆ. ಮತ್ತೆ ಇದು ನವೆಂಬರ್, ಡಿಸೆಂಬರ್‌ವರೆಗೆ ಮುಂದೆ ಹೋಗುತ್ತದೆ. ಈ ಅಲಮಟ್ಟಿ ಮುಳುಗಡೆ ಪ್ರದೇಶದಲ್ಲಿ ಈ ಸೇತುವೆ ಮುಳುಗಡೆಯಾಗುವುದರಿಂದ ಅದರ ಪೂರ್ವದಲ್ಲಿ ಅದರ ಎತ್ತರ ಜಾಸ್ತಿಯಾಗಬೇಕಾಗಿದೆ. ಅದಕ್ಕಾಗಿ ಕೂಡಲೇ ಏಪ್ರಿಲ್‌ನಲ್ಲಿ ಕಾರ್ಯಾರಂಭ ಮಾಡುವುದಕ್ಕೆ ಆದೇಶ ಕೊಡುತ್ತೀರಾ?

ಶ್ರೀ ಹೆಚ್.ಡಿ. ದೇವೇಗೌಡ : ಮಾನ್ಯ ಅಧ್ಯಕ್ಷರೇ, ಈಗಾಗಲೇ ನಾನು ಉತ್ತರದಲ್ಲಿ ಹೇಳಿದ್ದೇನೆ. ಈ ಒಂದು ಯೋಜನೆಯ ಬಗ್ಗೆ 3-4 ತಿಂಗಳಲ್ಲಿ ನಿರ್ಮಾಣ ಕಾರ್ಯಾರಂಭ ಮಾಡಲಾಗುವುದು ಎನ್ನುವುದನ್ನು (ಅ) ಪ್ರಶ್ನೆಗೆ, ಆರ್‌ಸಿಸಿ 'ಟಿ' ಬೀಮ್ ಒಳಗೊಂಡ ಡೆಕ್ ಸ್ಲ್ಯಾಬ 25.34 ಮೀ.ನ 12 ಸ್ಲ್ಯಾಬ್‌ಗಳು. ಅಂದಾಜು ವೆಚ್ಚ ರೂ. 1123 ಲಕ್ಷಗಳು, (ಇ) ಪ್ರಶ್ನೆಗೆ, ನಿಜ ಅದು ಟೆಂಡ್ ಮೌಲ್ಯ ನಿರ್ಧರಣಾ ಹಂತದಲ್ಲಿದೆ, (ಈ) ಪ್ರಶ್ನೆಗೆ ನಿರ್ಮಾಣ ಕಾರ್ಯಾರಂಭವಾದ ನಂತರ ಎರಡೂವರೆ ವರ್ಷಗಳಲ್ಲಿ ಪೂರ್ಣಗೊಳಿಸಲು ಯೋಜಿಸಿದೆ ಹಾಗೂ (ಉ) ಪ್ರಶ್ನೆಗೆ, ಸರ್ಕಾರದ ಗಮನಕ್ಕೆ ಬಂದಿದೆ. ಆದರೆ ಹಿನ್ನೀರಿನ ಮಟ್ಟ ಮೇಲೇರಿದಂತೆ ಅದಕ್ಕನುಗುಣವಾಗಿ ಕೆಲಸ ಪೂರ್ಣಗೊಳಿಸಲು ಯೋಜಿಸಲಾಗಿದೆ. ವಿವರಣೆಯೆಲ್ಲಾ ಇದರಲ್ಲಿ ಹೇಳಿದ್ದೇನೆ,

ಬಿನ್ನಿಪೇಟೆ ಕ್ಷೇತ್ರದಲ್ಲಿ ಪೋಲೀಸ್ ಠಾಣೆಯ ನಿರ್ಮಾಣ

1016 - ಶ್ರೀ ವಿ. ಸೋಮಣ್ಣ (ಬಿನ್ನಿಪೇಟೆ) : ಮಾನ್ಯ ಗೃಹ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಬಿನ್ನಿಪೇಟೆ ಕ್ಷೇತ್ರದ ಜಗಜೀವನರಾಂ ನಗರದ ಪೋಲೀಸ್ ಠಾಣೆಗೆ ಬೆಂಗಳೂರು ಮಹಾನಗರ ಪಾಲಿಕೆಯ ಸ್ಥಳವನ್ನು ನೀಡಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಆ) ಹಾಗಿದ್ದಲ್ಲಿ, ಕಟ್ಟಡ ನಿರ್ಮಾಣವನ್ನು ಪ್ರಾರಂಬಿಸಲಾಗಿದೆಯೇ?

ಇ) ಹಾಗಿದ್ದಲ್ಲಿ, ನಿರ್ಮಾಣ ಕಾರ್ಯ ಯಾವ ಹಂತದಲ್ಲಿದೆ, ಹಾಗೂ ಯಾವಾಗ ಪೂರ್ಣಗೊಳಿಸಲಾಗುವುದು?

ಶ್ರೀ ಪಿ.ಜಿ.ಆರ್. ಸಿಂಧ್ಯ (ಗೃಹ ಸಚಿವರು):

ಅ) ಹೌದು

ಆ) ಇಲ್ಲ